

ಕುಲುಮೆಯ ಬೆಳಕಿನಲ್ಲಿ ಭವಿಷ್ಯದ ಬೆಳಗು

**ಕುಲುಮೆ ನಂಬಿ ಬದುಕು ನಡೆಸುತ್ತಿದ್ದ ಸಿಕ್ಕಲುಗಾರರು ತಮ್ಮ ಬದುಕು ಕುಲುಮೆಗೆ ಬಿದ್ದಂತೆ ಪರಿತಪಿಸುತ್ತಿದ್ದಾರೆ. ಕುಲುಮೆ ಕೆಲಸಗಳು ವಿರಳವಾಗುತ್ತಿರುವ ಕಾರಣದಿಂದಾಗಿ, ಕುಲುಮೆ ನೆರಳಿನಾಚೆಗೆ ಬದುಕು ಕಟ್ಟಿಕೊಳ್ಳುವುದು ಅವರಿಗೆ ಅನಿವಾರ್ಯವಾಗುತ್ತಿದೆ.**

■ ಪ್ರಕಾಶ ಕಂದಕೂರ





ಕುಲುಮೆ ಉರಿದಷ್ಟೂ ಬದುಕು ಹಸನು

ಕುಲುಮೆಗಳಿದ್ದವು. ಸಿಕ್ಕಲಗಾರ ಸಮುದಾಯಕ್ಕೆ ಸೇರಿದ ಆ ಕುಲುಮೆಗಳು ತಲೆತಲಾಂತರದಿಂದ ನಡೆದುಕೊಂಡು ಬಂದಿದ್ದವು. ಆಗೆಲ್ಲ ಈಗಿನಷ್ಟು ಯಾಂತ್ರೀಕೃತ ಉಪಕರಣಗಳ ಬಳಕೆ ಇರಲಿಲ್ಲ. ಕಾರ್ಖಾನೆಗಳೂ ಕಡಿಮೆ. ಹಾಗಾಗಿ ರೈತರು, ಕೂಲಿಕಾರರು ತಮ್ಮ ಕಾಯಕದ ವಸ್ತುಗಳನ್ನು ಇವರಲ್ಲಿಯೇ ತಯಾರು ಮಾಡಿಸಿಕೊಳ್ಳುತ್ತಿದ್ದರು. ಸಿಕ್ಕಲಗಾರರ ಕುಲುಮೆಗಳನ್ನು ಅಂದಿನ ಕಾರ್ಖಾನೆಗಳೆಂದರೂ ತಪ್ಪಾಗಲಿಕ್ಕಿಲ್ಲ. ವರ್ಷವಿಡೀ ಕಾರ್ಯನಿರ್ವಹಿಸುತ್ತಿದ್ದ ಸಿಕ್ಕಲಗಾರರಿಗೆ ಕುಲುಮೆಗಳು ಅನ್ನ ನೀಡುವ ಕಲ್ಪವೃಕ್ಷಗಳಾಗಿದ್ದವು.

ಕೊಪ್ಪಳ ನಗರದಲ್ಲಿ ಪ್ರಸ್ತುತ ಇರುವುದು ಕೇವಲ ಮೂರೇ ಮೂರು ಕುಲುಮೆ. ಈ ಮೂರು ಕೂಡ ಪೂರ್ಣಾವಧಿ ಕಾರ್ಯನಿರ್ವಹಿಸುತ್ತಿಲ್ಲ. ಕೆಲಸ ಇದ್ದಾಗಷ್ಟೇ ಕುಲುಮೆಯಲ್ಲಿ ಬೆಂಕಿ. ಕೊಪ್ಪಳದ್ದು ಒಂದು ಉದಾಹರಣೆಯಷ್ಟೇ; ರಾಜ್ಯದೆಲ್ಲೆಡೆಯೂ ಕುಲುಮೆ ನಂಬಿ ಬದುಕುತ್ತಿರುವವ ಸ್ಥಿತಿಯೂ ಕುಲುಮೆಗೆ ಬಿದ್ದಂತೆಯೇ ಆಗಿದೆ.

‘ಇದು ಸಾಕಷ್ಟು ದೈಹಿಕ ಶ್ರಮ ಬೇಡುವ ಕೆಲಸ. ಹಾಗಾಗಿ ಈ ವೃತ್ತಿಯನ್ನು ಆಯ್ದುಕೊಳ್ಳುವವರ ಸಂಖ್ಯೆ ಶೂನ್ಯ ಎನ್ನಬಹುದು. ನನ್ನ ಮಕ್ಕಳು ಸಹ ಈ ವೃತ್ತಿಗಿಳಿಯಲು ಹಿಂಜರಿಯುತ್ತಿದ್ದಾರೆ. ಬಹುಶಃ ಈ ವೃತ್ತಿ ನಮಗೇ ಕೊನೆಯಾಗಲಿದೆ’ ಎಂದು ಹಸನ್ ರಸ್ತೆಯ ಕುಲುಮೆ ಮಾಲೀಕ ರೆಹಮಾನ್ ಬಾಷಾ ಸಿಕ್ಕಲಗಾರ್ ಗದ್ಗದಿತರಾಗುತ್ತಾರೆ.

‘ಕಮ್ಮಾರಿಕೆ ವೃತ್ತಿಯಲ್ಲಿ ಹೆಚ್ಚಿನ ಲಾಭವಂತೂ ಇಲ್ಲ. ಸಣ್ಣ ಪುಟ್ಟ ರೈತರಿಗೆ, ಕೂಲಿಕಾರರಿಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಇಷ್ಟು ದಿನ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದೇನೆ. ತುತ್ತು ಅನ್ನ ಕಂಡಿದ್ದೇನೆ. ಈಗಲೂ ಕುಲುಮೆಗಳಲ್ಲಿ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸಿಕೊಳ್ಳಲಾಗಿಲ್ಲ ಎಂದರೆ ನಮ್ಮ ಸಮುದಾಯದ ದಯನೀಯ ಸ್ಥಿತಿಯನ್ನು ನೀವು ಮನಗಾಣಬಹುದು. ಗವಿಮಠದ ಗವಿಸಿದ್ದಪ್ಪಜ್ಜ ಎಷ್ಟು ಶಕ್ತಿ ನೀಡುತ್ತಾನೋ ಅಷ್ಟು ದಿನ ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತೇನೆ’ ಎನ್ನುತ್ತಾರೆ ರೆಹಮಾನ್.

ಕುಲುಮೆಗಳಲ್ಲಿ ಬಳಕೆಯಾಗುವ ತಿದಿ, ಅಡಗಲ್ಲು, ಇದ್ದಿಲು ಗುಣಿ, ಇಕ್ಕಳ, ಗುಡ ಇತ್ಯಾದಿ ಹೆಸರುಗಳನ್ನೇ ನಮ್ಮಲ್ಲಿನ ಬಹುತೇಕರು ಮರೆತುಬಿಟ್ಟಿದ್ದಾರೆ. ಅಂತಹದ್ದರಲ್ಲಿ ಕುಲುಮೆ ವೃತ್ತಿಯ ಈ ಸಿಕ್ಕಲಗಾರರನ್ನು ಮಾತ್ರ ಯಾರು ಮತ್ತು ಯಾಕೆ ನೆನಪಿಟ್ಟುಕೊಂಡಾರು? ಆಧುನಿಕ ಪ್ರಪಂಚದಲ್ಲಿ ಯಂತ್ರೋಪಕರಣಗಳ ಬಳಕೆ ಹೆಚ್ಚಿದಂತೆಲ್ಲ ಕಮ್ಮಾರಿಕೆಗೆ ಧಕ್ಕೆಯುಂಟಾಗಿದೆ. ಅಸಮರ್ಪಕ ಇದ್ದಿಲು ಪೂರೈಕೆ, ಕೆಲಸಗಾರರ ಕೊರತೆ, ಸೂಕ್ತ ಸ್ಥಳಾವಕಾಶ ಇಲ್ಲದಿರುವುದು, ಮೂಲ ಸೌಲಭ್ಯಗಳ ಅಲಭ್ಯತೆಯಂತಹ ಸಮಸ್ಯೆಗಳು ಕೂಡ ಕುಲುಮೆಗಳ ನಾಶಕ್ಕೆ ಕಾರಣವಾಗಿವೆ. ಆ ಮೂಲಕ ನೇರವಾಗಿ ಅದೇ ವೃತ್ತಿಯನ್ನು ನಂಬಿ ಬದುಕುತ್ತಿದ್ದ ಸಿಕ್ಕಲಗಾರರ ಬದುಕು ಕೂಡ ಅಭದ್ರ ಸ್ಥಿತಿ ತಲುಪಿರುವುದು ನಿಜ.

ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಈ ಜನರತ್ತ ಸರ್ಕಾರ ಗಮನಹರಿಸಬೇಕು.

■